# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 225 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 11.03.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 225 • PRGI No:KARKAN/2023/88055 • VIJAYANAGARA • 11.03.2025 • Tuesday • Page:04 • Rs:2



Good Opportunity for Branding
1,20,000+
Digital E-PAPER READERS



No.1 HAMPI TIMES LEADING PRINT & DIGITAL District News Paper
Call Us for Advertisements: 9448633038


# ಗರಿಷ್ಠ ಅಂಕಕ್ಕೆ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ

## ಬಿಇಒ ಎಂ.ಚನ್ನಬಸಪ್ಪ ಹೇಳಿಕೆ | ವಿದ್ಯಾರ್ಥಿಗಳಿಗೆ ವಿನೂತನ ರೀತಿಯಲ್ಲಿ ತರಬೇತಿ | ಮಕ್ಕಳಲ್ಲಿ ಬಲಗೊಂಡ ಆತ್ಮವಿಶ್ವಾಸ

## ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ಹೊಸಪೇಟೆ– ಹಂಪಿ ಟೈಮ್ಸ್ ಸಹಯೋಗದ ವಿನೂತನ ಪ್ರಯೋಗಗಳಿಗೆ ಭರಪೂರ ಸ್ಪಂದನೆ






■ **ಹಂಪಿ ಟೈಮ್ಸ್ ಹೊಸಪೇಟೆ**

ಪರೀಕ್ಷೆಯಲ್ಲಿ ಕೇಳಲಾದ ಎಲ್ಲಾ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಸರಿಯಾದ ಕ್ರಮದಲ್ಲಿ ಉತ್ತರಿಸಿದರೆ ಗರಿಷ್ಠ 625 ಅಂಕ ಪಡೆಯಬಹುದಾಗಿದೆ. ನಿರಂತರವಾಗಿ ಓದಿ, ಬರೆದು ಅಭ್ಯಾಸ ಮಾಡಿದ ವಿದ್ಯಾರ್ಥಿಗಳು ಗುರಿ ತಲುಪುವುದು ನಿಶ್ಚಿತ, ಓದಿದ ವಿದ್ಯಾರ್ಥಿಗಳಲ್ಲಿ ಆಂತಕ ಎಂದೂ ಎದುರಾಗದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಚನ್ನಬಸಪ್ಪ ಹೇಳಿದರು.

ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ಮತ್ತು ಹಂಪಿ ಟೈಮ್ಸ್ ಸಹಯೋಗದಲ್ಲಿ ನಗರದ ಮಹಿಳಾ ಸಮಾಜ ಪ್ರೌಢಶಾಲೆಯಲ್ಲಿ ಸೋಮವಾರ ಆಯ್ದ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಗ್ಯಾರಂಟಿ 625 ತರಬೇತಿಗೆ ಚಾಲನೆ ನೀಡಿ ಮಾತನಾಡಿದರು. ಪರೀಕ್ಷೆಯಲ್ಲಿ ಈವರೆಗೂ ಶಿಕ್ಷಕರು ಶಾಲೆಯಲ್ಲಿ ಬೋಧಿಸಿದ ಪಾಠಗಳಲ್ಲಿನ ಪ್ರಶ್ನೆಗಳನ್ನೇ ಪರೀಕ್ಷೆಯಲ್ಲಿ ಕೇಳುತ್ತಾರೆ. ಪಠ್ಯಪುಸ್ತಕವನ್ನು ಸಂಪೂರ್ಣವಾಗಿ ಓದಿ ಮತ್ತೆ ಮತ್ತೆ ಪುನರ್ಮನನ ಮಾಡಿಕೊಳ್ಳಬೇಕು. ಇನ್ನುಳಿದ 10 ದಿನಗಳಲ್ಲಿ ಹಿಂದಿನ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಬೇಕು. ವಿಷಯಗಳಲ್ಲೆ ಏನಾದರೂ ತಿಳಿಯದಿದ್ದರೆ ಈಗಗಲೇ ನಿಮಗೆ ನೀಡಲಾದ ವಿಷಯವಾರು ಶಿಕ್ಷಕರ ಮೊಬೈಲ್ ಸಂಖ್ಯೆಗೆ ಕರೆಮಾಡಿ ಉತ್ತರ ಪಡೆದುಕೊಳ್ಳಬಹುದು. ಶಿಕ್ಷಕರು ಅವಿರತವಾಗಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿದ್ದಾರೆ. ಹಂಪಿ ಟೈಮ್ಸ್ ದಿನಪತ್ರಿಕೆಯೂ ಶಿಕ್ಷಣ ಇಲಾಖೆಯೊಂದಿಗೆ ಜೊತೆಗೂಡಿ ವಿನೂತನ ಮಾದರಿಯಲ್ಲಿ ಪ್ರಯೋಗಗಳನ್ನು ಮಾಡುತ್ತಾ ಬಂದಿರುವುದು ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ ಬಲಗೊಳಿಸುವುದಲ್ಲದೇ ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲೂ ಹರ್ಷ ತಂದಿದೆ. ವರ್ಷಪೂರ್ತಿ ದಿನಪತ್ರಿಕೆಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ದಿನಕ್ಕೊಂದು ವಿಷಯದಂತೆ ಓದಿ ನೆನಪಿಟ್ಟುಕೊಳ್ಳುವ ರೀತಿಯಲ್ಲಿ ಪ್ರಕಟಿಸಿದೆ. ನೇರ ಫೋನ್ ಇನ್ ಕಾರ್ಯಕ್ರಮ, ವಿಷನ್ 625 ಕಾರ್ಯಾಗಾರ, ಗೂಗಲ್ ಮೀಟ್ ಸೇರಿ ಹಲವು ಕಾರ್ಯಕ್ರಮಗಳನ್ನು ಈ ಬಾರಿ ನಡೆಸಿ ಮಕ್ಕಳಲ್ಲಿ ಚೈತನ್ಯ ತುಂಬಲಾಗಿದೆ. ಈ ಬಾರಿ ಫಲಿತಾಂಶ ನಮ್ಮದೆ ಎಂಬ ಆತ್ಮವಿಶ್ವಾಸ ವಿದ್ಯಾರ್ಥಿಗಳಲ್ಲಿ ವ್ಯಕ್ತಪಡಿಸುತ್ತಿರುವುದು ಹೆಮ್ಮೆ ತಂದಿದೆ. ವಿದ್ಯಾರ್ಥಿಗಳು ತಮ್ಮ ತಂದೆ ತಾಯಿ ಪರಿಶ್ರಮಕ್ಕೆ ನಿಮ್ಮ ಫಲಿತಾಂಶವೇ ಉತ್ತರವಾಗಲಿ ಎಂದರು.

ಮಹಿಳಾ ಸಮಾಜ ಪ್ರೌಢಶಾಲೆಯ ಆಡಳಿತಾಧಿಕಾರಿ ರಾಘವೇಂದ್ರ ಮಾತನಾಡಿ, ಪರೀಕ್ಷೆಗೆ ಸಿದ್ಧತೆ ಹಾಗೂ ಪರೀಕ್ಷೆಯಲ್ಲಿ ಬರೆಯುವ ವಿಧಾನ, ಆಯ್ಕೆ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

ಹಂಪಿ ಟೈಮ್ಸ್ ಸಂಪಾದಕ ಬಸಾಪುರ ಬಸವರಾಜ ಮಾತನಾಡಿ, ದಿನದ 24 ತಾಸುಗಳಲ್ಲಿ 8 ತಾಸು ಓದಲು ಪ್ರತಿಯೊಬ್ಬರಿಗೂ ಸಾಧ್ಯವಿದೆ. ಸಮಯಪಾಲನೆಯ ಯೋಜನೆ ಹಾಕಿಕೊಂಡು ಓದಬೇಕು. ಬೆಳಿಗ್ಗೆ 6 ರಿಂದ 7 ಗಂಟೆವರೆಗೆ ವ್ಯಾಯಾಮ, ಯೋಗ, ಧ್ಯಾನ ಮಾಡಬೇಕು, ಬೆಳಿಗ್ಗೆ 7 ರಿಂದ 9 ರವರೆಗೆ ಗಣಿತ/ವಿಜ್ಞಾನ ವಿಷಯ, ಬೆಳಿಗ್ಗೆ 9ರಿಂದ 10 ರವರೆಗೆ ವಿಶ್ರಾಂತಿ, ಬೆಳಿಗ್ಗೆ 10 ರಿಂದ ಮಧ್ಯಾಹ್ನ 12ರವರೆಗೆ ಕನ್ನಡ, ಇಂಗ್ಲೀಷ್, ಹಿಂದಿ ವಿಷಯಗಳ ಅಭ್ಯಾಸ, ಮಧ್ಯಾಹ್ನ 12 ರಿಂದ 2 ರವರೆಗೆ ಊಟ ಮತ್ತು ವಿಶ್ರಾಂತಿ, ಮಧ್ಯಾಹ್ನ 2 ರಿಂದ 4ರವರೆಗೆ ಸಮಾಜ ವಿಜ್ಞಾನ, 4 ರಿಂದ 5ರ ವರೆಗೆ ಬ್ರೇಕ್ ಮತ್ತು ವಾಕ್, ಸಂಜೆ 5 ರಿಂದ 7ರವರೆಗೆ ಹಿಂದಿನ ಪ್ರಶ್ನೆಪತ್ರಿಕೆಗಳಲ್ಲಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಬರೆಯುವುದು. ಸಂಜೆ 7 ರಿಂದ 8ರವರೆಗೆ ರಿಲ್ಯಾಕ್ಸ್ ಮತ್ತು ಕುಟುಂಬ ಸದಸ್ಯರೊಂದಿಗೆ ಮಾತನಾಡುವುದು. ರಾತ್ರಿ 8 ರಿಂದ 9.30ರವರೆಗೆ ಕೀ ಪಾಯಿಂಟ್, ಗಣಿತ ಫಾರ್ಮೂಲಗಳನ್ನು ಪುನರ್ಮನನ ಮಾಡುವುದು. ರಾತ್ರಿ 9.30 ರಿಂದ 10 ರವರೆಗೆ ದೈನಂದಿನ ಟಾರ್ಗೆಟ್ ಅವಲೋಕನ ಮತ್ತು ಮಲಗುವ ಮುನ್ನ ಪ್ರಶ್ನೆಗಳ ಪುನರಾವರ್ತನೆ ಮಾಡಿಕೊಂಡು ಮಲಗಬೇಕು. ಈರೀತಿ ಮಾಡಿದರೆ ದಿನದಲ್ಲಿ ಎಂಟು ಗಂಟೆ ಓದಬಹುದು. ಎಂಟು ಗಂಟೆ 8 ಗಂಟೆ ನಿದ್ರಿಸಬಹುದು. ಇದರಿಂದ ಆರೋಗ್ಯವೂ ಉತ್ತಮವಾಗಿರುತ್ತದೆ. ಮನಸ್ಸಿಗೂ ಒತ್ತಡವಾಗುವುದಿಲ್ಲ ಎಂದು ತಿಳಿಸಿದರು.

ಶಿಕ್ಷಣ ಸಂಯೋಜಕ ಶಿವರಾಮಪ್ಪ ನಿರ್ವಹಿಸಿದರು. ವಿಜ್ಞಾನ, ಗಣಿತ ಮತ್ತು ಇಂಗ್ಲೀಷ್ ವಿಷಯ ಶಿಕ್ಷಕರು ವಿದ್ಯಾರ್ಥಿಗಳ ಎಲ್ಲಾ ಗೊಂದಲಗಳಿಗೆ ಪರಿಹಾರ ಸೂಚಿಸಿ ಹೆಚ್ಚು ಅಂಕಗಳಿಸಲು ಪಾಲಿಸಬೇಕಾದ ನಿಯಮಗಳ ಕುರಿತು ಮಕ್ಕಳ ಮನಸ್ಸಿಗೆ ಮುಟ್ಟುವಂತೆ ವಿವರಿಸಿದರು.



## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ
ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ
–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

Call Us for Advertisements
Good Opportunity for Branding
ನಿಮ್ಮೂರ ಜಾತ್ರೆ ಉತ್ಸವಕ್ಕೆ ಸ್ವಾಗತ/ಶುಭಾಶಯ ಕೋರಲು ಬಯಸುವವರು
ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


## ಆನಂದ ಬಾಣ




## ಶ್ರೀಜಗದ್ಗುರು ಕೊಟ್ಟೂರು ಸಂಸ್ಥಾನಮಠದ ಸರ್ವಧರ್ಮ ಸಮನ್ವಯ ರಥೋತ್ಸವದ ಹಂಪಿ ಟೈಮ್ಸ್ ವಿಶೇಷ ಪುರವಣಿ







# ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಭಾವೈಕ್ಯತೆಯ ಸರ್ವಧರ್ಮ ಸಮನ್ವಯ ರಥೋತ್ಸವ



ಹೊಸಪೇಟೆ ಮೇನ್ ಬಜಾರಿನಲ್ಲಿ ಸರ್ವಧರ್ಮ ಸಮನ್ವಯ ರಥೋತ್ಸವದಲ್ಲಿ ಸಂವಿಧಾನ, ಎಲ್ಲಾ ಧರ್ಮಗಳ ಗ್ರಂಥಗಳನ್ನಿಟ್ಟು ಭಕ್ತರು ಸೋಮವಾರ ಸಂಜೆ ತೇರು ಎಳೆದು ಭಕ್ತಿ ಸಮರ್ಪಿಸಿದರು.

## ಬೇಸಿಗೆಯಲ್ಲಿ ನಿರ್ಜಲೀಕರಣ ಸಮಸ್ಯೆಯಾಗದಂತೆ ನಿಗಾ ವಹಿಸಿ : ಡಿಎಚ್‌ಒ ಡಾ.ಶಂಕರ್ ನಾಯ್ಕ

# ಆರೋಗ್ಯ ಇಲಾಖೆಯಿಂದ ವಿವಿಧೆಡೆ ದಾಹ ತಣಿಸಲು ನೀರಿನ ಅರವಟ್ಟಿಗೆ




■ **ಹಂಪಿ ಟೈಮ್ಸ್ ಹೊಸಪೇಟೆ**

ಬಿಸಿಲಿನ ತಾಪಮಾನ ಹೆಚ್ಚಾದಂತೆ ದೇಹದಲ್ಲಿ ನಿರ್ಜಲೀಕರಣ ಸಮಸ್ಯೆ ಹೆಚ್ಚಾಗಲಿದೆ. ಜನಸಾಮಾನ್ಯರಿಗೆ ನೀರಿನ ದಾಹ ತಣಿಸಲು ಆರೋಗ್ಯ ಇಲಾಖೆಯಿಂದ ಕುಡಿಯುವ ನೀರಿನ ಅರವಟ್ಟಿಗೆ ಆರಂಭಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಂಕರ್ ನಾಯ್ಕ ಹೇಳಿದರು.

ನಗರದ ಚಿತವಾಡ್ಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ಕುಡಿಯುವ ನೀರಿನ ಅರವಟ್ಟಿಗೆ ಉದ್ಘಾಟಿಸಿ ಸೋಮವಾರ ಮಾತನಾಡಿದರು, ಹೃದ್ರೋಗಿಗಳು, ರಕ್ತದೊತ್ತಡ ಸಮಸ್ಯೆಯಿಂದ ಬಳಲುತ್ತಿರುವವರು, ನವಜಾತ ಶಿಶುಗಳು, ಚಿಕ್ಕ ಮಕ್ಕಳು, ಬಾಣಂತಿಯರು, ಹೊರಾಂಗಣದಲ್ಲಿ ಕೆಲಸ ಮಾಡುವ ಕಾರ್ಮಿಕರು ಹಾಗೂ ಇತರೆ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರು ಬೇಸಿಗೆ ಕಾಲದಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ವಹಿಸಬೇಕು. ದೇಹವನ್ನು ನಿರ್ಜಲೀಕರಣಗೊಳಿಸುವ ಅಲ್ಕೋಹಾಲ್, ಚಹಾ, ಕಾಫಿ ಸೇರಿದಂತೆ ಹಾನಿಕಾರಕ ತಂಪು ಪಾನೀಯ ಸೇವನೆ ಮಾಡಬಾರದು. ಹೆಚ್ಚು ಪ್ರೋಟೀನ್ ಯುಕ್ತ ಅಹಾರ ಸೇವನೆ ಹಾಗೂ ಕೆಂಪು ಮಾಂಸ ತಿನ್ನುವುದನ್ನು ಕಡಿಮೆ ಮಾಡುವುದು ಒಳ್ಳೆಯದು. ಶುದ್ಧ ಕುಡಿಯುವ ನೀರನ್ನು ದಿನಕ್ಕೆ ಹೆಚ್ಚು ಕುಡಿಯುವುದರಿಂದ ದೇಹದಲ್ಲಿ ಶುಷ್ಕತೆ ಉಂಟಾಗದಂತೆ ನಿಗಾ ವಹಿಸಬೇಕು. ಆರಂಭದಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿರುವುದರಿಂದ ಆರೋಗ್ಯದ ಬಗ್ಗೆ ಹೆಚ್ಚು ಮುಂಜಾಗೃತಾ ಕ್ರಮಗಳನ್ನು ಪಾಲಿಸಬೇಕಿದೆ. ಇತರೆ ಸಂಘ, ಸಂಸ್ಥೆಗಳು ಸ್ವಯಂಪ್ರೇರಿತರಾಗಿ ಸ್ಥಳೀಯರಿಗೆ ಕುಡಿಯುವ ನೀರು ಸಿಗುವಂತೆ ಅರವಟ್ಟಿಗೆಗಳನ್ನು ಹೆಚ್ಚಾಗಿ ತೆರೆಯಬೇಕು ಎಂದರು.

ಈ ವೇಳೆ ಜಿಲ್ಲಾ ಆರ್.ಸಿ.ಎಚ್ ಅಧಿಕಾರಿ ಡಾ.ಜಂಬಯ್ಯ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ತಾಲೂಕು ಆರೋಗ್ಯ ಅಧಿಕಾರಿ ಡಾ.ಬಸವರಾಜ ಸೇರಿದಂತೆ ಆರೋಗ್ಯ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು.

# ಮಹಿಳೆಯರು ಆರೋಗ್ಯಕ್ಕೆ ಹೆಚ್ಚು ಆದ್ಯತೆ ನೀಡಿ

## ವೈದ್ಯೆ ಸಿಂಧೂ ಮೂರ್ತಿ ಹೇಳಿಕೆ | ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

■ **ಹಂಪಿ ಟೈಮ್ಸ್ ಕೊಟ್ಟೂರು.**

ಮಹಿಳೆಯರು ತಮ್ಮ ದೈನಂದಿನ ಕಾರ್ಯ ಚಟುವಟಿಕೆ ಜೊತೆಗೆ, ತಮ್ಮ ವೈಯಕ್ತಿಕ ಶುಚಿತ್ವ ದೈಹಿಕ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಹಾಗಾಗ ವೈದ್ಯರಲ್ಲಿ ತಪಾಸಣೆ ಮಾಡಿಸಿಕೊಂಡು ಉತ್ತಮ ಆರೋಗ್ಯ ಕಾಯ್ದುಕೊಳ್ಳಬೇಕೆಂದು ವೈದ್ಯೆ ಸಿಂಧೂ ಮೂರ್ತಿ ಹೇಳಿದರು.

ಕೊಟ್ಟೂರೇಶ್ವರ ಕಾಲೇಜಿನಲ್ಲಿ ಜೆ.ಸಿ.ಐ.ಕೊಟ್ಟೂರು ಕಾಟನ್, ಐ.ಕ್ಯೂ.ಎ.ಸಿ, ಸೈನ್ಸ್ ಫೋರಂ, ಆರ್‌ಎನ್‌ಡಿ ಹಾಗೂ ಎನ್‌ಸಿಸಿ, ಎನ್.ಎಸ್.ಎಸ್, ಮಹಿಳಾ ಘಟಕ ಸಂಯೋಗದೊಂದಿಗೆ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಗುಪ್ತರೋಗಗಳಿಗೆ ಅವೈಜ್ಞಾನಿಕ ಪದ್ಧತಿಯಡಿ



ಚಿಕಿತ್ಸೆ ಪಡೆಯಬಾರದು ಎಂದು ತಿಳಿಸಿದರು. ಪ್ರಾಂಶುಪಾಲ ಡಾ.ಎಂ ರವಿಕುಮಾರ್, ಜೆ.ಸಿ.ಐ. ಕೊಟ್ಟೂರು ಕಾಟನ್ ಅಧ್ಯಕ್ಷ ಡಾ. ಬಸವನಂದ ಅವರು ಮಹಿಳೆಯರ ಆರೋಗ್ಯದ ಮಹತ್ವ ಕುರಿತು ವಿವರಿಸಿದರು. ಐ.ಕ್ಯೂ.ಎ.ಸಿ. ಸಂಯೋಜಕರು ಡಾ. ಪೃಥ್ವಿ ರಾಜ್ ಸಿ ಬೆಡ್ಜರಗಿ. ಜೆ.ಸಿ.ಐ ಸದಸ್ಯರು ಮಂಗಳ ಮತ್ತು ಜಲಾಜಾಕ್ಷಿ ಉಪಸ್ಥಿತರಿದ್ದರು. ಉಪನ್ಯಾಸಕಿ ಶ್ವೇತ, ಗಗನಶ್ರೀ, ರಶ್ಮಿ, ಭವಾನಿ, ಶಂಕ್ರಮ್ಮ, ಪೂಜಾ, ರೂಪ. ಡಾ. ಶಿವಕುಮಾರ್, ಕೊಟ್ರೇಶ್, ಬಸವರಾಜ್ ಬಣಕಾರ್ ಇದ್ದರು. ರಹಿಂಬಿ, ಪೂಜಾ, ಪ್ರತಿಮಾ. ಎಂ ಎಸ್. ಅನುಪಮ ನಿರ್ವಹಿಸಿದರು.


## CHANGE OF NAME

I, **Togarcheti Sankalapur Ratna**
D/o Late Sri. Pompapathi Shastry Sanklapur, Aged about 76 years, #7/44, Pampasastry Bungalow, ISR road, Hospet-583201, Vijayanagara Dist.
I have Changed my Name as **Togarcheti Sankalapur Ratna (New Name)** Instead of Togarcheti Sadasiva Ratna Dutta (Old Name), sworn before Notary K.SURABHI DURGA at HOSAPETE vide Affidavit on 10/03/2025

14 ಭಾಷೆ
ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

## ಸ್ಟುಡೆಂಟ್ ಕಾಲಂ

### ವೈಜ್ಞಾನಿಕವಾಗಿ ಯೋಚಿಸಿ ಮೂಢನಂಬಿಕೆಯನ್ನು ಓಡಿಸೋಣ



ಚಿಕ್ಕದಾದ ಒಂದು ಗ್ರಾಮದಲ್ಲಿ ಸಂಪ್ರದಾಯವಾದಿಗಳಾಗಿದ್ದರು ಮೂಡನಂಬಿಕೆಗಳನ್ನು ಅಷ್ಟೇ ನಂಬುತ್ತಿದ್ದರು. ವಿದ್ಯವಂತರ ಸಂಖ್ಯೆಯು ತುಂಬಾ ಕಡಿಮೆ. ಆ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಮಾತ್ರ ಇದ್ದು ಅಲ್ಲಿನ ಮಕ್ಕಳು ದೂರದ ಊರಿಗೆ ನಡೆದುಕೊಂಡೆ ಹೋಗಬೇಕಾಗಿತ್ತು. ಆದರೆ ಮಕ್ಕಳು ಹುಣ್ಣಿಮೆ ಅಮಾವಾಸ್ಯೆ ದಿನಗಳಂದು ಶಾಲೆಗೆ ಹೋಗಲಿಕ್ಕೆ ಮನೆಯಲ್ಲಿ ಮತ್ತು ಊರಿನ ಜನರು ಅವಕಾಶ ಕೊಡುತ್ತಿರಲಿಲ್ಲ ಕಾರಣ ಅವರಲ್ಲಿರುವ ಮೌಢ್ಯತೆ ಮತ್ತು ಮೂಡನಂಬಿಕೆ ಹೀಗೆ ಶಾಲೆಗೆ ಹೋಗದ ಆ ಗ್ರಾಮದ ಮಕ್ಕಳನ್ನು ಕುರಿತು ಶಿಕ್ಷಕರು ವಿಚಾರಿಸಿದಾಗ ಹುಣ್ಣಿಮೆಯ ಕಾರಣ ನಾವು ಶಾಲೆಗೆ ಬಂದಿರಲಿಲ್ಲ ಗುರುಗಳೇ ಎಂದು ಉತ್ತರಿಸಿದರು.

ಹುಣ್ಣಿಮೆಗೂ ಮತ್ತು ನೀವು ಶಾಲೆಗೆ ಬರದೇ ಇರೋದಕ್ಕೂ ಏನು ಕಾರಣ ಎಂದು ಕೇಳಿದಾಗ, ಮಕ್ಕಳಿಗೆ ಉತ್ತರ ಗೊತ್ತಿರಲಿಲ್ಲ ಇದೇ ಪ್ರಶ್ನೆಯನ್ನು ಮನೆಗೆ ಬಂದು ಮಕ್ಕಳು ತಂದೆ ತಾಯಿಗಳ ವಿಚಾರಿಸಿದಾಗ ಅವರಿಗೂ ಸಹ ಸರಿಯಾದ ಉತ್ತರ ಗೊತ್ತಿರಲಿಲ್ಲ, ಊರಿನಲ್ಲಿ ಕೆಲವರು ವಿಚಾರಿಸಿದಾಗ ಊರಿನ ಹಿರಿಯರು ಹೇಳಿದರು. ಅದಕ್ಕೆ ನಾವು ಅವರ ಮಾತನ್ನು ಪಾಲನೆ ಮಾಡುತ್ತಿದ್ದೇವೆ ಎಂದರು. ಪಾಲಕರಿಂದ ಅಸ್ಪಷ್ಟ ಉತ್ತರ ದೊರಕಿತು ಇದರಿಂದ ಅಸಂತೃಪ್ತರಾದ ಮಕ್ಕಳು ಊರಿಗೆ ಹಿರಿಯರಾದಂತಹ ಆದಂತಹ ಮೂಕಜ್ಜಿಯನ್ನು ವಿಚಾರಿಸಿದರು.

ಮೂಕಜ್ಜಿಯು ಮಕ್ಕಳೇ ಆ ಊರಿನ ದಾರಿಯಲ್ಲಿ ಹಿಂದೆ 30–40 ವರ್ಷಗಳ ಹಿಂದಿನ ಮಾತು ಇಬ್ಬರು ಗಂಡು ಮಕ್ಕಳು ಕೆಲಸಕ್ಕೆ ಆ ಊರ ಕಡೆಗೆ ನಡೆದು ಕೊಂಡು ಹೋಗಿದ್ದರು. ಆದರೆ ವಾಪಸ್ ಬರಲಿಲ್ಲ ಅವರ ಸತ್ತ ಸುದ್ದಿ ಮಾತ್ರ ಬಂದಿತ್ತು. ಹುಣ್ಣಿಮೆಯ ದಿನ ಹೋಗಿದ್ದಕ್ಕಾಗಿ ದೆವ್ವಗಳು ಅವರನ್ನು ಸಾಯಿಸಿರಬಹುದು ಎಂದು ಬಲವಾಗಿ ನಂಬಲಾಯಿತು ಅಂದಿನಿಂದ ಹುಣ್ಣಿಮೆ ಅಮಾವಾಸ್ಯೆ ದಿನದಂದು ಯಾರೂ ಊರ ಆಚೆ ಈಚೆ ಹೋಗುವುದಿಲ್ಲ ಎಂದಳು ಮೂಕಜ್ಜಿ. ಆಗ ಮಕ್ಕಳಿಗೆ ಇದನ್ನು ನಂಬುವುದು ಕಷ್ಟವಾಯಿತು ಶಾಲೆಯಲ್ಲಿ ಒಂದು ವಿಶೇಷ ಕಾರ್ಯಕ್ರಮವಿತ್ತು ಅಂದು ಫೆಬ್ರವರಿ 28 ರಾಷ್ಟ್ರೀಯ ವಿಜ್ಞಾನ ದಿನ. ಮುಂಜಾನೆಯ ಸಮಯದಲ್ಲಿ ವಿಜ್ಞಾನ ವಸ್ತು ಪ್ರದರ್ಶನ ವಿತ್ತು ಮಧ್ಯಾಹ್ನದ ಸಮಯದಲ್ಲಿ ವಿಜ್ಞಾನಿಗಳ ಕುರಿತು ಭಾಷಣ ಮಾಡುತ್ತಾ ಸ್ಮರಿಸಿಕೊಳ್ಳುವುದು, ಶಿಕ್ಷಕರು ಭಾಷಣ ಮಾಡುವಾಗ ಕೆಲವು ಮಕ್ಕಳು ಎದ್ದುನಿಂತು ತಮಗೆ ತಿಳಿಯದ ಪ್ರಶ್ನೆಗೆ ಉತ್ತರ ಕೇಳುತ್ತಿದ್ದರು. ಆಗ ವಿದ್ಯಾರ್ಥಿ ಎದ್ದು ನಿಂತು ಪ್ರಶ್ನಿಸಿದ ಸರ್ ಅಮಾವಾಸ್ಯೆ ಮತ್ತು ಹುಣ್ಣಿಮೆ ಸಂದರ್ಭದಲ್ಲಿ ಏಕೆ ಆಚೆ ಕಡೆಗೆ ಹೋಗಬಾರದು ಎಂದು ಆಗ ಶಿಕ್ಷಕರು ನಮ್ಮನ್ನು ಭೂಮಿಗೆ ಬಂಧಿಸಿರುವ ಬಲವೇ ಗುರುತ್ವಾಕರ್ಷಣ ಬಲ ಸಹಜವಾಗಿ ಭೂಮಿ ಮತ್ತು ಚಂದ್ರ ಇಬ್ಬರು ತಮ್ಮದೇ ಆದ ಗುರುತ್ವಾಕರ್ಷಣ ಬಲಗಳನ್ನು ಹೊಂದಿದ್ದಾರೆ. ಭೂಮಿಯ ಗುರುತ್ವಾಕರ್ಷಣ ಬಲಕ್ಕಿಂತ ಚಂದ್ರನ ಗುರುತ್ವಾಕರ್ಷಣ ಬಲ 1/6 ರಷ್ಟು ಕಡಿಮೆ ಇದೆ. ಹುಣ್ಣಿಮೆ ಮತ್ತು ಅಮಾವಾಸ್ಯೆ ದಿನಗಳೆಂದು ಚಂದ್ರನ ಗುರುತ್ವಾಕರ್ಷಣ ಬಲ ಭೂಮಿಯ ಮೇಲಿನ ಸಾಗರ ಸಮುದ್ರಗಳ ನೀರಿನ ಅಲೆಗಳ ಮಟ್ಟ ವನ್ನು ಹೆಚ್ಚಿಸುತ್ತದೆ ಇದು ವೈಜ್ಞಾನಿಕ ಸತ್ಯ ಇದರಿಂದ ಭೂಮಿಯ ಮೇಲಿನ ಪ್ರಾಣಿಗಳು ಮತ್ತು ಮನುಷ್ಯರ ಮೇಲೂ ಪರೋಕ್ಷವಾಗಿ ಪ್ರಭಾವ ಬೀರುತ್ತದೆ ಏಕೆಂದರೆ ನಮ್ಮ ದೇಹದಲ್ಲಿ ಹರಿಯುವ ರಕ್ತ ಮತ್ತು ನೀರು ದೇಹದ ತುಂಬೆಲ್ಲ ಮೇಲ್ಮುಖ ಮತ್ತು ಕೆಳಮುಖವಾಗಿ ಎರಡು ಮಾರ್ಗಗಳಲ್ಲಿ ನಿರಂತರವಾಗಿ ಹರಿಯುತ್ತದೆ ಆದರೆ ಹುಣ್ಣಿಮೆ ಮತ್ತು ಅಮಾವಾಸ್ಯೆ ದಿನಗಳಂದು ಚಂದ್ರನ ಗುರುತ್ವದ ಪ್ರಭಾವದಿಂದ ಮೇಲ್ಮುಖ ಸೆಳೆತ ಹೆಚ್ಚಾಗಿ ಮೆದುಳಿಗೆ ಹೆಚ್ಚಿನ ಪ್ರಮಾಣದ ದ್ರವಹರಿದು ಒತ್ತಡ ಹೆಚ್ಚಾಗಿ ನಮ್ಮ ಮನಸ್ಸು ಒತ್ತಡಕ್ಕೆ ಸಿಲುಕಿ ಚಿತ್ತಚಂಚಲವಾಗಬಹುದು. ಭವಿಷ್ಯ ಈ ಕಾರಣಕ್ಕೆ ಅಮಾವಾಸ್ಯೆ ದಿನಗಳು ಎಂದು ಹೊರಗಡೆ ಪ್ರಯಾಣ ಬೇಡ ಅಪಘಾತ ಘಟನೆಗಳು ಉಂಟಾಗಬಹುದು ಎಂಬುವುದು ಬಹು ದಿನಗಳಿಂದ ನಮ್ಮ ಹಿರಿಯರು ಹೇಳುತ್ತಾ ಬಂದಿರುವ ಈ ಮಾತುಗಳು ಮೂಡನಂಬಿಕೆ ಎನಿಸಿದರು ಇದರ ಹಿಂದೆ ಒಂದು ವೈಜ್ಞಾನಿಕ ಸತ್ಯ ಅಡಗಿರುವುದನ್ನು ನಾವೆಲ್ಲರೂ ತಿಳಿಯಬೇಕಾಗಿದೆ.

**– ಗೋರಂಟಿ ಸುಮಿತ್ರ 9ನೇ ತರಗತಿ**
ಸರ್ಕಾರಿ ಪ್ರೌಢಶಾಲೆ ಬ್ಯಾಸಿಗಿದೇರಿ, ಹಗರಿಬೊಮ್ಮನಹಳ್ಳಿ ತಾಲೂಕು

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.


–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038


### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


# ಹಸಿರು ಕಿತ್ತೆಸೆದರೆ ಉಸಿರಿಗೂ ಕಂಟಕ



ನಾವು ನಿಂತಿರುವ ನೆಲವು ಸತ್ವಪೂರ್ಣವಾಗಿದ್ದರೆ ಬದುಕು ಸುಖವಾಗಿರುವುದಕ್ಕೆ ಸಾಧ್ಯವಾಗುತ್ತದೆ. ನೆಲ ಅಂದರೆ ಬರಿ ಮಣ್ಣಿನ ಭೂಮಿಕೆಯಲ್ಲ. ಬದಲಿಗೆ ಕೋಟ್ಯಾಂತರ ಜೀವ ಜಂತುಗಳನ್ನು ಒಳಗೊಂಡ ತಾಯಿಯ ಮಡಿಲು. ಇಲ್ಲಿ ಕಲ್ಲು–ಮಣ್ಣಿನಿಂದ ಹಿಡಿದು ನೀರು–ಬೇರು, ಗಿಡ–ಮರ–ಬಳ್ಳಿ, ಗುಡ್ಡ–ಬೆಟ್ಟ–ಕಣಿವೆಗಳ ಜೊತೆ ಯಲ್ಲಿ ಬಿಸಿಲು, ಮಳೆ, ಚಳಿ ಅಂಬೋದೆಲ್ಲ ಒಂದಕ್ಕೊಂದು ಹೊಂದಿ ಕೊಂಡು ಬದುಕು ನಡೆಸಿವೆ. ಈ ಬದುಕು ಹಸಿರಿನ ಅಗತ್ಯತೆ ಯನ್ನು ಬಿಗುವಾಗಿ ಹಿಡಿದಿರುವುದು ಸಹಜವಾದ ಸಂಗತಿಯಾಗಿದೆ. ಮನುಷ್ಯ ಈ ಹಸಿರಿನ ನೆಲವನ್ನೇ ತನ್ನ ಜೀವನದ ಪಥವಾಗಿ ಅಪ್ಪಿಕೊಂಡು ವಿಕಸಿತನಾಗಿದ್ದಾನೆ. ಹಸಿರು ಅಂದ ಕೂಡಲೇ ನಮಗೆ ಮರ–ಗಿಡ ನೆನಪಾಗುತ್ತದೆ ಅಷ್ಟೇ. ಇದರಿಂದಾಚೆಗೂ ಹಸಿರು ಇದೆ ನೆಲವನ್ನು ಅಪ್ಪಿಕೊಂಡಿರುವ ಹುಲ್ಲು; ವಿಸ್ತಾರವಾದ ಆಗಸ; ಸಮುದ್ರ; ಪ್ರಾಣಿ–ಪಕ್ಷಿಗಳು; ನೀರು–ಆಹಾರವೆಲ್ಲವೂ ಹಸಿರಿನ ಸ್ಪರ್ಶವನ್ನು ಬಿಡದಂತೆ ಹಿಡಿದುಕೊಂಡು ಒಂದರೊಳಗೊಂದು ಸೇರಿಕೊಂಡಿವೆ. ಹಸಿರಿನ ಹೊದಿಕೆಯನ್ನೇ ಹೊದ್ದು ಹಾಸಿಕೊಂಡು ಜೀವ ಪಡೆದ ಮನುಷ್ಯ ಮೆಲ್ಲಗೆ ಅಭಿವೃದ್ಧಿ ಅನ್ನುವ ಪರಿಕಲ್ಪನೆಯನ್ನು ಲೋಕದ ಮುಂದೆ ಅಪ್ಪಿಕೊಂಡಂತೆ ಈ ನೆಲದ ಮೇಲಿನ ಹಸಿರಿನ ಸತ್ವವನ್ನು ಬರಿದು ಮಾಡುತ್ತ ನಡೆಯುವುದಕ್ಕೆ ಶುರು ಮಾಡಿದ. ಅದು ಎಷ್ಟು ಅತಿರೇಖವನ್ನು ಮುಟ್ಟಿತು ಅಂದರೆ ನೆಲದ ಹಸಿರಿನಿಂದ ಬದುಕುವ ಜೀವನ ಮೀಮಾಂಸೆಯು ಕೈಗಾರಿಕಾ ನೆಲೆಗೆ ಪಲ್ಲಟಗೊಂಡು ಮರ–ಗಿಡ–ಬಳ್ಳಿ; ಗುಡ್ಡ–ಗಾಡು; ಪ್ರಾಣಿ–ಪಕ್ಷಿಗಳೆಲ್ಲ ಒಟ್ಟಾಗಿ ಜೀವನ ನಡೆಸುತ್ತಿದ್ದ ನೆಲವು ರಸ್ತೆ, ಕಟ್ಟಡ, ಸೇತುವೆಗಳೆಂಬ ಭೌತಸಂಸ್ಕೃತಿಯ ರಚನೆಯು ನೆಲವನ್ನು ನೀರು ಗಾಳಿ ಬೆಳಕು ಸಿಗದಂತೆ ಬಂಧಿಸಿದವು. ಈ ರೀತಿಯ ಬಂಧನವೇ ಮನುಷ್ಯನ ದುರಂತಕ್ಕೆ ಅಡಿ ಇಟ್ಟಂತೆ ಆಯಿತು.

ಕೈಗಾರಿಕೆಯ ಮೀಮಾಂಸೆಯನ್ನು ಬಹುಸ್ತರದಲ್ಲಿ ಕಲಿಯುವ ಮತ್ತು ಅನುಕರಿಸುವ ಕಾರ್ಯವನ್ನು ನಾವು ಬಿಗುವಾಗಿ ಮಾಡುತ್ತಿದ್ದೇವೆ. ಇದ್ದರಿಂದ ನಮಗೆ ಹಣ ಮತ್ತು ಸುಖ ಹೆಚ್ಚು ದೊರೆಯುತ್ತದೆ ಅಂಬೋ ತಿಳುವಳಿಕೆಯೇ ನಮ್ಮ ನಡುವಿನ ಪರಿಸರವನ್ನು ನಾಶ ಮಾಡುವುದಕ್ಕೆ ಬಹುಪಾಲು ಕಾರಣವಾಗಿದೆ. ನಾವುಗಳು ನಮ್ಮ ಬದುಕಿನ ನಡೆಯಲ್ಲಿ ಪ್ರಕೃತಿಯನ್ನು ನೆಚ್ಚಿಕೊಂಡಿದ್ದಾಗ ಹಸಿರೇ ಪ್ರಧಾನವಾಗಿತ್ತು. ಹಣ್ಣು–ಹಂಪಲು; ಗೆಡ್ಡೆ–ಗೆಣಸು; ನಾರು–ಬೇರು; ಸೊಪ್ಪುಗಳನೆಲ್ಲ ಕಾಡಿನಿಂದವೋ ಹಿತ್ತಿಲಿನಿಂದವೋ ತರುವಾಗ ನಾಳೆಗೂ ಗಿಡ–ಮರವನ್ನು ಉಳಿಸಬೇಕು ಅನ್ನುವ ಹಂಬಲ ನಮ್ಮೊಳಗೆ ಇತ್ತು. ಹಣ್ಣು–ಕಾಯಿ ಏನೋ ಕೀಳುವಾಗ ಗಿಡದ ರೆಂಬೆ–ಕೊಂಬೆಗಳು ಕದಲದಂತೆ ನಿಗವಹಿಸು ವುದಿತ್ತು. ನಮ್ಮೂರಿನಲ್ಲಿ ದಟ್ಟ ಮಳೆಗಾಲ ಶುರುವಾಯಿತು ಅಂದರೆ ತಂಡಿಯು ನೆಲದಲ್ಲಿ ನಿಂತು ಮನಷ್ಯರ ದೇಹಕ್ಕೆ ತಾಕುವುದಕ್ಕೆ ಅಣಿಯಾದಂತೆ ದೇಹವನ್ನು ಬೆಚ್ಚಗೆ ಇಡುವ ಬಿದಿರಿನ ಕಳಲೆ(ಕಣಿಲೆ), ಸೀಗೆಸೊಪ್ಪಿನ ಸಾರು ಇತ್ಯಾದಿ ಯನ್ನು ಆಹಾರದ ಭಾಗ ವಾಗಿ ಹುಡುಕಿ ತಿನ್ನುತ್ತಿದ್ದದ್ದು ಸಾಮಾನ್ಯ ವಾಗಿತ್ತು. ಈ ಬಿದಿರಿನ ಕಳಲೆಯು ಕಾಡಿನ ಕಣಿವೆಗಳ ದಿನ್ನೆಯಲ್ಲಿ ಹರಡಿಕೊಂಡು ಇರುತ್ತಿದ್ದವು. ಬಿದಿರಿನ ಹಿಂಡಲಿನ ಮಡಿಲಿ ನಲ್ಲಿ ಮೊಳಕೆ ಕಂಡಿರುವ ಈ ಕಳಲೆಗಳನ್ನು ಕತ್ತರಿಸಿ ತರುವಾಗ ಮುಂದಿನ ಪೀಳಿಗೆ ಯನ್ನು ಉಳಿಸಿಯೇ ಮೂರೋ–ನಾಲ್ಕೋ ಕಳಲೆಯನ್ನು ಕತ್ತರಿಸಿ ತರಲಾಗು ತ್ತಿತ್ತು. ಒಟ್ಟಿನಲ್ಲಿ ಮುಂದೆ ತನ್ನ ಬದುಕಿಗೆ ಬೇಕು ಅನ್ನುವ, ಪ್ರಕೃತಿದತ್ತವಾದ ಪ್ರತಿಯೊಂದನ್ನು ಹಾಳು ಮಾಡದೇ ಅದರ ಉತ್ಪನ್ನವನ್ನು ನಿಗವಾಗಿ ಬಿಡಿಸಿ ಬಳಸುವುದಿತ್ತು. ಜೇನು ಕೀಳುವಾಗ ಎಂದೂ ಹುಳುಗಳಿಗೆ ಬೆಂಕಿ ತಾಕಿಸಿ ಕೊಲ್ಲುವುದಕ್ಕೆ ಯಾರು ಒಪ್ಪುತ್ತಿರಲಿಲ್ಲ. ಇದರಿಂದಾಚೆಗೆ ಗಿಡ–ಮರವನ್ನು ದೇವರೆಂದು ನಂಬಿ ಪೂಜಿಸುವ ನೆಲೆಯಿಂದ ಪ್ರಕೃತಿಯನ್ನು ಉಳಿಸಿಕೊಂಡಿದ್ದ ಕಾರಣ ಹಸಿರು ಬಿಗುವಾಗಿ ನಮ್ಮೊಂದಿಗೆ ನಿಂತಿತ್ತು. ಆದರೆ ಆಧುನಿಕತೆಯು ನಮ್ಮ ಬದುಕಿನ ನಿತ್ಯ ಅಗತ್ಯತೆಯನ್ನು ಕೈಗಾರಿಕೆಗಳು ಉತ್ಪಾದಿಸಿ ಅಂಗಡಿ–ಮಳಿಗೆಯಲ್ಲಿ ನೀಡುತ್ತಿದೆ. ವ್ಯವಹಾರಿಕವಾದ ಬಂಡವಾಳಶಾಹಿ ಜಗತ್ತು ಮನುಷ್ಯನ ಸಂವೇದನೆಯನ್ನು ಪೂರ್ಣವಾಗಿ ಕಬಳಿಸಿ ಅವನಿಂದ ಹಸಿರು ಪರಿಸರವನ್ನು ದೂರ ವಾಗಿಸಿ ಅಗಲಿಸಿದೆ. ಯಾವಾಗ ಬಂಡವಾಳಶಾಹಿತ್ವವು ಮನುಷ್ಯನ ತಾಳಿಕೆ–ಬಾಳಿಕೆಯನ್ನು ನಿಗದಿ ಪಡಿಸುವ ಹಸಿರು ಪರಿಸರ ಮೌಲ್ಯ ವನ್ನು ಕಳೆಯುವಂತೆ ಮಾಡಿತೋ ಆಗಲೇ ಹಸಿರು ತನ್ನ ಉಸಿರನ್ನು ಕಳೆದುಕೊಂಡು ಬರಿದಾಗುವುದಕ್ಕೆ ಶುರುವಾಯಿತು.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ನೆಲದ ಸಂಬಂಧವನ್ನು ಗಪ್ಪಗೆ ಅಂಟಿಕೊಂಡಿರುವ ಹಸಿರಿನ ಪರಿಸರದ ಕೋಟ್ಯಾಂತರ ಜೀವ–ಜಂತುಗಳು, ಮರ–ಗಿಡಗಳು ಮನಷ್ಯನಿಗೆ ಪ್ರಧಾನವಾದ ಜೀವನ ಅಭಿವ್ಯಕ್ತಿಗಳೆಂದು ತೋರಲಿಲ್ಲ. ಬದಲಿಗೆ ಅದರಿಂದ ಸುಖ ಅಥವಾ ಬಾರಿ ಹಣಕಾಸಿನ ಲಭ್ಯತೆ ಇಲ್ಲ ಎನ್ನುವುದನ್ನು ಆಧುನಿಕ ಪ್ರಜ್ಞೆಯಿಂದ ತಿಳಿದವನು ಮರ–ಗಿಡವನ್ನು ಕತ್ತರಿಸಿ, ನೆಲವನ್ನು ಮಟ್ಟಾಸು ಮಾಡಿ, ನೀರಿನ ಕೆರೆ–ಗುಮ್ಮಿ–ಮಡುಗಳನೆಲ್ಲ ಮಣ್ಣು ತುಂಬಿಸಿ ಮುಚ್ಚಿ. ಜಲದ ಕಣ್ಣನ್ನು ನೆಲದ ಕಣ್ಣನ್ನು ಮುಚ್ಚಿ ಕಟ್ಟಡಗಳನ್ನು ನಿಲ್ಲಿಸಿ ಅಭಿವೃದ್ಧಿ ಎಂದು ಹೇಳುತ್ತಿರುವ ನಾವುಗಳು ಹಸಿರನ್ನು ಬಣ್ಣಗಳ ರೂಪದಲ್ಲಿ ನೋಡುತ್ತಿದ್ದೇವೆ. ಯಾವಾಗ ನಮ್ಮ ಪರಿಸರ ಅನ್ನುವ ತಾತ್ವಿಕತೆಯು ಗುಡ್ಡ–ಬೆಟ್ಟ–ಗಿಡ–ಮರ ಪ್ರಾಣಿ–ಪಕ್ಷಿ–ನೀರು–ನೆಲ ಅನ್ನುವ ತಿಳುವಳಿಕೆಯ ವಾಸ್ತವವು ಪಲ್ಲಟಗೊಂಡು ಮನೆ – ಮಾಲು – ಸಂಕೀರ್ಣ – ರಸ್ತೆ – ಕೈಗಾರಿಕೆ – ಹೋಟೆಲು – ಪಬ್ಬು – ಬಾರುಗಳೆಂಬ ಭೌತ ಪ್ರಪಂಚವು ಪರಿಸರವಾಗಿ ರೂಪ ಪಡೆದಿರುವಾಗ ಹಸಿರಿಗೆ ನಮ್ಮಲ್ಲಿ ಜಾಗ ಸಿಗುವುದು ಕಷ್ಟವಾಗಿದೆ.

ನಮ್ಮ ದುಡಿಮೆ ಮತ್ತು ಆಹಾರದ ಹುಡುಕಾಟವು ಪ್ರಕೃತಿಯ ನೆಲದ ಜೊತೆಗೆ ಇಲ್ಲ. ಬಹುಪಾಲು ಕೈಗಾರಿಕೆ ಮತ್ತು ತಾಂತ್ರಿಕ ವ್ಯವಸ್ಥೆಯೊಂದಿಗೆ ನಡೆಯುತ್ತಿರುವುದರಿಂದ ನಮಗೆ ಹಸಿರಿನ ಪರಿಸರ ಮತ್ತು ಪ್ರಜ್ಞೆಯು ದಕ್ಕುತ್ತಿಲ್ಲ. ಈ ಕಾರಣದಿಂದ ನೆಲದ ಸ್ವರೂಪ ಪಲ್ಲಟವಾಗಿದೆ ಮಳೆ–ಬಿಸಿಲು–ಚಳಿಯು ತನ್ನ ದಾರಿಯನ್ನು ಪಲ್ಲಟಿಸಿಕೊಂಡಿದೆ. ಹಸಿರು ಯಾವಾಗ ನೆಲದಲ್ಲಿ ಬರಿದಾಯಿತೋ ಆಗ ಮನಷ್ಯನು ತನ್ನೊಳಗೆ ಬರಿದಾಗುವುದಕ್ಕೆ ಆರಂಭಿಸಿದ. ರೋಗಗಳು ದೇಹವನ್ನು ಬಾಧಿಸುವುದಕ್ಕಿಂತ ಅವನ ದೇಹವೇ ರೋಗದ ಗೂಡಾಗಿ ನಿಂತಿದೆ. ದೇಹವು ತನ್ನ ಕಸುವು ಕಳೆದುಕೊಂಡು ಟೊಳ್ಳಾಗುತ್ತ ಬಂದಿರುವುದು ನಮಗೆ ಅನುಭವಕ್ಕೆ ದಕ್ಕುತ್ತಿದ್ದರೂ ನಮಗೆ ಪರಿಸರದ ಪ್ರಜ್ಞೆಯ ವಾಸನೆ ಮೂಗಿಗೆ ಬಡಿಯುತ್ತಿಲ್ಲ.

ಆಗ ಐವತ್ತು ಕೆಜಿಯ ಭತ್ತದ ಮೂಟೆಯನ್ನು ಒಬ್ಬರೇ ಎತ್ತಿ ಊರಿಂದ ಊರಿಗೆ ಹೊರುತ್ತಿದ್ದರು, ಹತ್ತಕ್ಕಿಂತ ಹೆಚ್ಚು ಮಕ್ಕಳು ಹೆತ್ತು ಸಾಕುತ್ತಿದ್ದರು, ಮಳೆ–ಬಿಸಿಲು–ಚಳಿಗೆ ಸೋತವರು ಇರಲಿಲ್ಲ. ನೂರಕ್ಕಿಂತ ಹೆಚ್ಚು ವರ್ಷ ಬದುಕು ಮಾಡುತ್ತಿದ್ದರು. ಅನ್ನ ಆಹಾರಕ್ಕೆ ಪ್ರಕೃತಿಯನ್ನೇ ಅವಲಂಬಿಸಿದರೂ ನೆಮ್ಮದಿ ಅವರಲ್ಲಿತ್ತು. ಈಗ ಇದೆಲ್ಲ ಕಲ್ಪನೆಯ ಭಾಗದಂತೆ ಕಾಣಿಸುತ್ತದೆ. ನಾವೆಲ್ಲ ಬಿಸಿಲಿಗೆ ಹೆದರುತ್ತಿದ್ದೇವೆ ದಿನ ದಿನವು ಬಿಸಿಲಿನ ಜಳ ತಡೆಯಲು ಸಾಧ್ಯವಾಗುತ್ತಿಲ್ಲ. ಶಾಲೆ–ಕಾಲೇಜಿಗೆ ಹೋಗುವವರು ಬಿಸಿಲಿಗೆ ತಲೆ ಸುತ್ತಿ ಬೀಳುತ್ತೇವೆ ಅಂತ. ಸರ್ಕಾರ ಎಲ್ಲೋ ಅಲರ್ಟ ನೀಡಿದೆ ಎಂದು ಮನೆಯಲ್ಲಿಯೇ ಕುಳಿತ್ತಿದ್ದಾರೆ. ಇಂತಹ ಕಠಿಣ ಕಾಲ ಬಂದಿದ್ದು ನಾವು ಹಸಿರನ್ನು ಕಿತ್ತು ದೂರವಾಗಿಸಿದ್ದೇ ಆಗಿದೆ. ನಮ್ಮ ಬದುಕು ನೆಮ್ಮದಿಯ ಉಸಿರು ಕಾಣಬೇಕಾದರೆ ಹಸಿರು ಅಗತ್ಯವೆಂಬ ಅರಿವು ನಮ್ಮದಾಗಬೇಕು.

# ನನಗೇನು ಬೇಕು ಗೊತ್ತೇ ಅಪ್ಪ?

ತನ್ನ ಕೆಲಸದಲ್ಲಿ ಮಗ್ನನಾಗಿದ್ದ ತಂದೆಗೆ "ಅಪ್ಪ, ನಾನು ನಿನಗೊಂದು ಪ್ರಶ್ನೆ ಕೇಳಲೇ?" ಎಂದು ಮಗ ಕೇಳಲು ಆಯ್ತು ಕೇಳು ಎಂದು ತಲೆ ಎತ್ತದೆ ಅಪ್ಪ ಹೇಳಿದ.

"ಅಪ್ಪ, ನೀನು ಒಂದು ಗಂಟೆಗೆ ಎಷ್ಟು ಹಣ ಸಂಪಾದಿಸುವೆ?" ಎಂದು ಮಗ ಕೇಳಿದ. ಅಚ್ಚರಿಯಿಂದ ತಲೆಯೆತ್ತಿದ ಅಪ್ಪ "ನಿನಗೇಕೆ ಬೇಕು ಅದೆಲ್ಲ? ಎಂದು ತುಸು ಮುನಿಸಿನಿಂದ ಕೇಳಿದ. "ಹೇಳು ಅಪ್ಪ, ಸುಮ್ಮನೆ ಕೇಳಿದೆ" ಎಂದು ಮಗ ಹಠ ಹಿಡಿದ. ಬೇಸರವಾದರೂ ತೋರಿಸಿಕೊಳ್ಳದೆ ಅಪ್ಪ "ನಾನು ಒಂದು ಘಂಟೆಗೆ 1 ಸಾವಿರ ರೂಗಳನ್ನು ಗಳಿಸುತ್ತೇನೆ."

ಹೌದೇ? ಎಂದು ಮುಖ ಸಪ್ಪೆ ಮಾಡಿದ ಮಗು ಮುಂದೆ ಕೆಲವೇ ಕ್ಷಣಗಳಲ್ಲಿ "ಅಪ್ಪ, ನನಗೆ ನೀನು ಐನೂರು ರೂ ಕೊಡುತ್ತೀಯಾ" ಎಂದು ಕೇಳಿದ. ಅಪ್ಪನ ಕೋಪ ಹೆಚ್ಚಾಯಿತು.

"ಐನೂರು ರೂ ನಿನಗೇಕೆ ಬೇಕು" ಎಂದು ತುಸು ಗಡಸು ಧ್ವನಿಯಲ್ಲಿ ಹೇಳಿದ. ಮತ್ತೆ ಅಷ್ಟಕ್ಕೆ ಸುಮ್ಮನಾಗದೆ... "ಈಗಾಗಲೇ ಮನೆ ತುಂಬಾ ಸಾಕಷ್ಟು ಆಟಿಕೆಗಳಿವೆ, ಸಣ್ಣ ಪುಟ್ಟ ಸಾಮಾನುಗಳನ್ನು ಖರೀ ದಿಸಿ ಮನೆ ತುಂಬಾ ಹರಡು ವುದು ಬೇಡ. ಸುಮ್ಮನೆ ನಿನ್ನ ರೂಮಿಗೆ ಹೋಗಿ ಓದಿಕೋ. ನಾನು ಅಷ್ಟು ಕಷ್ಟಪಟ್ಟು ಕೆಲಸ ಮಾಡುವುದು ನೀವೆಲ್ಲ ಚೆನ್ನಾಗಿ ಓದಲಿ, ಸುಖ ವಾಗಿರಲಿ ಎಂದೇ ಹೊರತು ಈ ರೀತಿ ಆಟವಾಡಿ ಕೊಂಡಿರಲು ಅಲ್ಲ" ಎಂದು ಜೋರಾಗಿ ಹೇಳಿದ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಅಪ್ಪನ ಜೋರು ಮಾತಿಗೆ ಪುಟ್ಟ ಹುಡುಗ ತಣ್ಣಗೆ ಎದ್ದು ತನ್ನ ಕೋಣೆಗೆ ತೆರಳಿ ಬಾಗಿಲನ್ನು ಹಾಕಿಕೊಂಡ.

ಇದೀಗ ಅಪ್ಪ ಸುಮ್ಮನೇ ಕುಳಿತು ಮಗ ಹಾಗೇಕೇ ಕೇಳಿದ, ಹಾಗೆ ಹಣ ಕೇಳಲು ಆತನಿಗೆ ಅದೆಷ್ಟು ಧೈರ್ಯ ಎಂದೂ ಕೋಪಗೊಂಡ ಒಂದು ಗಂಟೆಯ ನಂತರ ತುಸು ತಣ್ಣಗಾದ ಮನಸ್ಥಿತಿಯಲ್ಲಿ ಅಪ್ಪ ಮತ್ತೆ ಯೋಚಿಸಿದ. ಮಗ ಎಂದೂ ಕೇಳದ ಮಗ ಇಂದು 500 ರೂ ಕೇಳುತ್ತಿದ್ದಾನೆ ಎಂದರೆ ಆತನಿಗೆ ನಿಜವಾಗಿಯೂ ಹಣದ ಅಗತ್ಯ ಇದೆಯೇ? ಎಂದು. ಮತ್ತೆ ಯೋಚಿಸಿದಾಗ ಈ ಮೊದಲು ಎಂದೂ ಮಗ ಹಣ ಕೇಳಿಲ್ಲ ಎಂದು ಆತನಿಗೆ ನೆನಪಾಯಿತು. ಕೂಡಲೇ ಎದ್ದು ಮಗನ ಕೋಣೆಯೆಡೆ ನಡೆದ ಆತ ಬಾಗಿಲನ್ನು ತಟ್ಟಿ 'ಮಗು ಮಲಗಿರುವೆಯಾ?' ಎಂದು ಕೇಳಿದ.

ಕೋಣೆಯ ಒಳಗಿಂದ "ಇಲ್ಲ ಅಪ್ಪ, ನಾನು ಮಲಗಿಲ್ಲ" ಎಂದು ಉತ್ತರಿಸಿದ ಮಗ ಕೋಣೆಯ ಬಾಗಿಲು ತೆರೆದ. ಸಾರಿ ಪುಟ್ಟ, ನಾನು ನಿನ್ನ ಮೇಲೆ ಕೂಗಾಡಿದೆ. ಇಂದು ಮುಂಜಾನೆಯಿಂದ ಕೆಲಸದ ಒತ್ತಡದಿಂದ ಬಳಲುತ್ತಿದ್ದ ನಾನು ನನ್ನೆಲ್ಲಾ ಸಿಟ್ಟನ್ನು ನಿನ್ನ ಮೇಲೆ ಹಾಕಿದೆ. ತೆಗೆದುಕೋ ಈ 500ರೂ. ಆದರೆ ಅದಕ್ಕೂ ಮುನ್ನ ನಿನಗೆ ಈ ಹಣ ಏಕೆ ಬೇಕು ಎಂಬುದನ್ನು ನನಗೆ ಹೇಳು?" ಎಂದು ಮೆಲುವಾಗಿ ಕೇಳಿದ.

ನೇರವಾಗಿ ಕುಳಿತು ನಗುಮುಖದಿಂದ "ಥ್ಯಾಂಕ್ ಯು ಅಪ್ಪ" ಎಂದ ಮಗನ ಮುಖದ ಸಂತೋಷವನ್ನು ನೋಡಿ ಆತನ ತಲೆ ನೇವರಿಸಿದ ಅಪ್ಪ "ಹಾಗಾದರೆ ಹೇಳು... ನಿನಗೇಕೆ ಹಣ ಬೇಕು?" ಎಂದು ಕೇಳಿದ. ಕೂಡಲೇ ತನ್ನ ಹಾಸಿಗೆಯ ಮೇಲಿರುವ ದಿಂಬಿನ ಕೆಳಗೆ ಕೈ ಹಾಕಿದ ಆ ಬಾಲಕ ತುಸು ಹಣವನ್ನು ತಂದು ಅಪ್ಪನ ಕೈಯಲ್ಲಿ ಇಟ್ಟ. ಈಗಾಗಲೇ ಮಗನ ಬಳಿ ಹಣ ಇರುವುದನ್ನು ಕಂಡು ಅಪ್ಪನ ಕೋಪ ಇನ್ನೇನು ಹೆಚ್ಚಾಗಬೇಕು ಅನ್ನುವಷ್ಟರಲ್ಲಿ ಮಾತಿಗೆ ಆರಂಭಿಸಿದ ಮಗ 'ಅಪ್ಪ ನನ್ನ ಬಳಿ 500ರೂ ಹಣ ಮಾತ್ರ ಇದೆ... ನನಗೆ ಸಾವಿರ ರೂ ಬೇಕಾಗಿತ್ತು ಅದಕ್ಕೆ ನಿನ್ನನ್ನು ಕೇಳಿದೆ.

"ಈಗಾಗಲೇ 500 ರೂ ಇದ್ದರೂ ಮತ್ತೆ 500 ರೂ ಕೊಡು ಎಂದು ಕೇಳಲು ಕಾರಣವೇನು? "ಎಂದು ತುಸು ಹಲ್ಲು ಮಸೆದು ಅಪ್ಪ ಕೇಳಲು ಮಗ ಆತುರದಿಂದ " ಅಪ್ಪ ನನ್ನ ಬಳಿ ನೀನು ಕೊಟ್ಟ ಹಣ ಸೇರಿದರೆ ಸಾವಿರ ರೂ ಆಗುತ್ತದೆ. ಅದನ್ನು ನಾನು ನಿನಗೆ ಕೊಡುತ್ತೇನೆ. ನಾಳೆಯ ದಿನ ನಿನ್ನ ಒಂದು ಗಂಟೆ ಸಮಯಯನ್ನು ನೀನು ನನಗೆ ಕೊಡು. ನಾಳೆ ಸಾಯಂಕಾಲ ತುಸು ಬೇಗ ನೀನು ಬಂದು ನಮ್ಮೊಂದಿಗೆ ಊಟ ಮಾಡುತ್ತೀಯಾ ಎಂದು ಅಪ್ಪನ ಉತ್ತರಕ್ಕಾಗಿ ಕಾತರದಿಂದ ನೋಡಿದ.

ಮಗನ ಕೋರಿಕೆಯನ್ನು ಕೇಳಿ ತಣ್ಣಗಾದ ತಂದೆ. ಏನು ಹೇಳಬೇಕೆಂದು ಆತನಿಗೆ ತೋಚಲಿಲ್ಲ. ಮಗನನ್ನು ತನ್ನೆರಡು ಕೈಗಳಿಂದ ತಬ್ಬಿ ಹಿಡಿದು ನನ್ನನ್ನು ಕ್ಷಮಿಸಿ ಬಿಡು ಪುಟ್ಟ, ನಾನು ನಿಮಗಾಗಿ ದುಡಿಯುತ್ತಿರುವೆ ಎಂಬ ಅಹಮ್ಮಿನ ಪೊರೆ ನನ್ನನ್ನು ಆವರಿಸಿತ್ತು, ಆದರೆ ನನ್ನ ಸಂಪಾದನೆ ಮಾತ್ರವಲ್ಲ ನಾನು ಕೂಡ ನಿಮ್ಮೊಂದಿಗೆ ಕಾಲ ಕಳೆಯಬೇಕು ಎಂಬ ಆಸೆಯನ್ನು ತೀರಿಸದಷ್ಟು ನನ್ನ ಕೆಲಸದಲ್ಲಿ ನಿರತನಾಗುವುದು ತಪ್ಪು ಎಂದು ನೀನು ನನ್ನ ಕಣ್ಣು ತೆರೆಸಿರುವೆ ಎಂದು ಹೇಳಿ ಮಗನನ್ನು ತಬ್ಬಿದ ಆತ. ಸ್ವಲ್ಪ ಹೊತ್ತಿನ ಮೌನದ ನಂತರ ಕಣ್ಣೊರೆಸಿಕೊಂಡು "ಇನ್ನು ಮುಂದೆ ನನ್ನೆಲ್ಲ ಕೆಲಸಗಳನ್ನು ಬೇಗನೇ ಪೂರೈಸಿ ನಾನು ಮನೆಗೆ ಬಂದು ನಿಮ್ಮೊಂದಿಗೆ ಕಾಲ ಕಳೆಯುತ್ತೇನೆ, ಪ್ರಾಮಿಸ್" ಎಂದು ಹೇಳಿದಾಗ ಮಗುವಿನ ಮುಖದಲ್ಲಿ ಬೆಳದಿಂಗಳ ಕಾಂತಿ ಹೊರಹೊಮ್ಮಿತು.

ಮುಖ ಪುಸ್ತಕದಲ್ಲಿ ಓದಿದ ಈ ಕಥೆ ನಮ್ಮ ನಿಮ್ಮಂತವರಿಗೆ ಪಾಠ ಆಗಲೇಬೇಕು. ನಮ್ಮ ಕುಟುಂಬದ ಆರ್ಥಿಕ ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳಲು ನಾವು ಕಷ್ಟಪಟ್ಟು ದುಡಿಯುತ್ತೇವೆ ನಿಜ, ಆದರೆ ನಮ್ಮ ಕುಟುಂಬಕ್ಕೆ ಕೇವಲ ನಾವು ಗಳಿಸುವ ಹಣದ ಅವಶ್ಯಕತೆ ಮಾತ್ರ ಇರುವುದಿಲ್ಲ, ಬದಲಾಗಿ ಪ್ರೀತಿ, ವಿಶ್ವಾಸ, ಮಮತೆಯನ್ನು ಕೂಡ ಮಕ್ಕಳು ನಮ್ಮಿಂದ ಬಯಸುತ್ತವೆ. ಅವರ ಮಾತುಗಳಿಗೆ ಕಿವಿಯಾಗಲಿ, ಅವರ ಆಸೆ ಆಕಾಂಕ್ಷೆಗಳಿಗೆ ಓಗೊಡಲಿ, ಅವರ ಆಟ ಪಾಠಗಳಿಗೆ ವೀಕ್ಷಕರಾಗಲಿ ಎಂದು ಮಕ್ಕಳು ಬಯಸುತ್ತಾರೆ.

ಕಾಲ ಎಂಬುದು ಕೈಯಲ್ಲಿ ಹಿಡಿದ ಉಸುಕಿನಂತೆ.... ಒಮ್ಮೆ ಸೋರಿ ಹೋದರೆ ಮತ್ತೆ ಹಿಡಿಯಲು ಬಾರದು. ಕಂಪನಿಯೊಂದರಲ್ಲಿ ದುಡಿಯುವ ಓರ್ವ ವ್ಯಕ್ತಿ ಸತ್ತು ಹೋದರೆ ಶೋಕ ವ್ಯಕ್ತಪಡಿಸುವ ಕಂಪನಿ ಮರುದಿನವೇ ಮತ್ತೊಬ್ಬ ವ್ಯಕ್ತಿಯನ್ನು ಆತನ ಜಾಗದಲ್ಲಿ ಕೂರಿಸುತ್ತದೆ. ಆದರೆ ನಮ್ಮ ಕುಟುಂಬಕ್ಕೆ ನಮ್ಮ ಇರುವಿಕೆಯೇ ಮುಖ್ಯ. ಅವರ ಬದುಕಿನಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುವ ನಾವು, ನಾವಿಲ್ಲದ ಬದುಕನ್ನು ಅವರು ಕಲ್ಪಿಸುವುದೂ ಅಸಾಧ್ಯ ಎಂಬ ಸತ್ಯವನ್ನು ಅರಿತರೆ ಐಹಿಕ ಸುಖ ಭೋಗಗಳಿಗಿಂತ ಪ್ರೀತಿ, ಮಮತೆ, ವಿಶ್ವಾಸಗಳಿಗೆ, ಕೌಟುಂಬಿಕ ಬಂಧನಕ್ಕೆ ಹೆಚ್ಚು ಸಮಯವನ್ನು ನೀಡಲೇಬೇಕು. ಏನಂತೀರಾ ಸ್ನೇಹಿತರೇ?

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಎಲ್ಲರ ಬದುಕು ಆನಂದಮಯವಾಗಿರಲಿ

**ಶ್ರೀಜಗದ್ಗುರು ಬಸವಲಿಂಗ ಮಹಾಸ್ವಾಮಿಗಳ ನುಡಿ | ಬೇಸಿಗೆಯಲ್ಲಿ ಮಕ್ಕಳಿಗೆ ಸಂಸ್ಕಾರ ಶಿಬಿರ, ಹೆಸರು ನೋಂದಾಯಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರಿಂದ ಶ್ರೀ ಜ.ಡಾ.ಸಂಗನಬಸವ ಮಹಾಸ್ವಾಮಿಗಳ ಭಕ್ತಿಗೀತೆಗಳ ಸಿಡಿ ಬಿಡುಗಡೆ**






■ ಹಂಪಿ ಟೈಮ್ಸ್ ಹೊಸಪೇಟೆ

ಎಲ್ಲರ ಬದುಕು ಆನಂದಮಯದಿಂದ ಕೂಡಿರಬೇಕಾದರೆ, ಸತ್ಯದ ಹಾದಿಯಲ್ಲಿ ಪ್ರತಿಯೊಬ್ಬರು ನಡೆಯಬೇಕು. ತಂತ್ರ ಕುತಂತ್ರಗಳು ಎಂದೂ ಫಲಿಸಲಾರವು. ಮಾಡುವ ಕಾಯಕದಲ್ಲಿ ನಿಷ್ಠೆ, ಭಕ್ತಿ ಇದ್ದರೆ ಭಗವಂತನನ್ನು ಕಾಣಬಹುದು ಎಂದು ಶ್ರೀ ಜಗದ್ಗುರು ಬಸವಲಿಂಗ ಮಹಾಸ್ವಾಮಿಗಳು ಹೇಳಿದರು.

ನಗರದ ಶ್ರೀ ಕೊಟ್ಟೂರುಸಂಸ್ಥಾನಮಠದಲ್ಲಿ ಡಾ.ಸಂಗನಬಸವ ಮಹಾಸ್ವಾಮಿಯಗಳ ತೃತೀಯ ಪುಣ್ಯಸ್ಮರಣೆ ಹಾಗೂ 8ನೇ ವರ್ಷದ ಸರ್ವಧರ್ಮ ಸಮನ್ವಯ ರಥೋತ್ಸವದಂಗಾಗಿ ಜರುಗಿದ ಧಾರ್ಮಿಕ ಸಭೆಯ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ಒಂದು ಸಾವಿರದ ನೂರ ಹನ್ನೊಂದು ಮುತ್ತೈದೆಯರಿಗೆ ಉಡಿ ತುಂಬಲಾಗಿದೆ. ಲೋಕ ಕಲ್ಯಾಣಕ್ಕಾಗಿ ಮತ್ತು ಶಾಂತಿಗಾಗಿ ಮುತ್ತೈದೆಯರಿಗೆ ಉಡಿತುಂಬಲಾಗಿದೆ. ತಾಯಂದಿರು ತಾಳ್ಮೆಯನ್ನು ಬೆಳೆಸಿಕೊಳ್ಳಬೇಕು. ಮನೆಯ ಮಗಳು ಇನ್ನೊಂದು ಮನೆಯ ಸೊಸೆಯಾಗುತ್ತಾಳೆ. ಆ ಮನೆಯಲ್ಲಿ ತನ್ನ ಮಗಳಿಗೆ ಮನೆಯ ಯಜಮಾನಿಕೆ ನಿರೀಕ್ಷಿಸುವ ತಾಯಿ ತನ್ನ ಮನಗೆ ಬಂದ ಸೊಸೆಗೆ ಅದೇ ಅಧಿಕಾರವನ್ನು ಸ್ವಯಂಪ್ರೇರಿತವಾಗಿ ನೀಡಬೇಕು. ಮಗಳು ಗಂಡನ ಮನೆಯಲ್ಲಿ ಜವಾಬ್ದಾರಿಹೊತ್ತು ಬೆಳಗಬೇಕೆ ಹೊರತು ತವರು ಮನೆಯಲ್ಲಿ ಅಧಿಕಾರವನ್ನು ಚಲಾಯಿಸಬಾರದು. ಯಾವ ಮನೆಗಳಲ್ಲಿ ಮದುವೆಯಾದ ಮಗಳು ತವರು ಮನೆಯಲ್ಲಿ ಅಧಿಕಾರ ಚಲಾಯಿಸುತ್ತಾರೋ ಆ ಮನೆಗಳಲ್ಲಿ ನೆಮ್ಮದಿ ಇರದು. ಮಹಿಳೆಯರು ಮದುವೆಗೂ ಮುನ್ನ ತವರು ಮನೆ ಕೀರ್ತಿ ಬೆಳಗಿದಂತೆ, ಮದುವೆ ನಂತರ ಗಂಡನ ಮನೆಗೆ ಬೆಳಕಾಗಬೇಕು. ಅವರಿವರ ಬಗ್ಗೆ ಹೋಲಿಕೆ ಮಾಡಿಕೊಳ್ಳದೇ ಜೀವನ ಸಾಗಿಸಿದರೆ ಬದುಕು ಆನಂದಮಯವಾಗಿರುತ್ತದೆ ಎಂದರು.

ಬೆಳಿಗ್ಗೆ ವಳಬಳ್ಳಾರಿ ಶ್ರೀ ಸುವರ್ಣಗಿರಿ ವಿರಕ್ತಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಹೇಮಕೂಟ ಮಹಾದ್ವಾರ ಭೂಮಿ ಪೂಜೆ ನೆರವೇರಿಸಿದರು. ನಂತರ ಹಂಪಿ ಟೈಮ್ಸ್ ದಿನಪತ್ರಿಕೆಯ ಶ್ರೀಮಠದ ಸರ್ವಧರ್ಮ ತೇರು ವಿಶೇಷ ಪುರವಣಿ ಬಿಡುಗಡೆಗೊಳಿಸಿ ಆಶೀರ್ವಚನ ನೀಡಿದರು. ಶಿವಮೊಗ್ಗದ ನಿ.ಜ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಮಾತನಾಡಿ, ತೇರಿನಲ್ಲಿ ಎಲ್ಲಾ ಧರ್ಮಗಳ ಗ್ರಂಥಗಳನ್ನಿಟ್ಟು, ವಚನಗಳು, ಸಂವಿಧಾನ ಸೇರಿದಂತೆ ಧಾರ್ಮಿಕ ಗ್ರಂಥಗಳನ್ನಿಟ್ಟು ತೇರ ಎಳೆದಿರುವುದು ಸಾಮರಸ್ಯದ ಸಂಕೇತವಾಗಿದ್ದು, ಅಪರೂಪಗಳಲ್ಲಿ ಅಪರೂಪದ ರಥೋತ್ಸವ ಇಲ್ಲಿ ನಡೆದಿದೆ. ಎಲ್ಲಾ ಧರ್ಮಗಳ ಸಾರ ಒಂದೇ ಎನ್ನುವುದನ್ನು ಪ್ರತಿಯೊಬ್ಬರು ಅರಿಯಬೇಕು. ಬಸವಣ್ಣನವರು ನುಡಿದಂತೆ ನಡೆದು ತೋರಿದರು ಎಂದರು.

ಸಮಾಜ ಸೇವಕಿ ಬಿ.ಎಲ್.ರಾಣಿ ಸಂಯುಕ್ತ ಮಾತನಾಡಿ, ಮಕ್ಕಳಲ್ಲಿ ಸಂಸ್ಕಾರ ಕಾಣೆಯಾಗುತ್ತಿರುವುದು ನೋವಿನ ಸಂಗತಿ. ಎಲ್ಲಾ ತಾಯಂದಿರು ತಮ್ಮ ಮನೆಯ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳೆಸಬೇಕಿದೆ. ಇಂದು ನಾವು ನಿರ್ಲಕ್ಷಿಸಿದರೆ ಮುಂದೆ ನಮಗೆ ಅದೇ ಸಮಸ್ಯೆ ಎದುರಾಗಬಹುದು. ಸಂಸ್ಕಾರವುಳ್ಳವರು ಜಗತ್ತನ್ನೆ ಗೆಲ್ಲಬಲ್ಲರು ಎಂದರು. ವಿವಿಧ ಸೇವಾಕಾರ್ಯಗೈದವರನ್ನು ಸನ್ಮಾನಿಸಲಾಯಿತು. ವಿವಿಧ ಶಾಖಾಮಠಗಳ ಶ್ರೀಗಳು, ಸಮಾಜದ ಗಣ್ಯರು ಉಪಸ್ಥಿತರಿದ್ದರು. ನೀಲಮ್ಮ, ಸಿ.ಎಸ್.ಶರಣಯ್ಯ ನಿರ್ವಹಿಸಿದರು. ಕಡ್ಡಿರಾಂಪುರದ ಕೆ.ರಾಮು ಹಗಲುವೇಷ ಕಲಾ ತಂಡದಿಂದ ಮೋಹಿನಿ ಭಸ್ಮಾಸುರ ಕಥಾ ಪ್ರಸಂಗ ಜರುಗಿತು.


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಕ್ರೋಧಿ

**11–03–2025 – ಮಂಗಳವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆಶ್ಲೇಷ |
| ಯೋಗ | : ಅತಿಗಂಡ |
| ಕರಣ | : ಬಾಳವ |
| ಸೂರ್ಯೋದಯ | : 06:40:44 |
| ಸೂರ್ಯಾಸ್ತ | : 18:33:16 |
| ರಾಹು ಕಾಲ | : 15:35–17:04 |
| ಯಮಘಂಡ ಕಾಲ | : 09:39–11:08 |
| ಗುಳಿಕ ಕಾಲ | : 12:37–14:06 |



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 10–03–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1602.94 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 10076 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 25.560 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1584.83 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 2169 ಕ್ಯುಸೆಕ್ |
| ಸಾಮರ್ಥ್ಯ | 7.215 ಟಿಎಂಸಿ |

# ಸರ್ವಧರ್ಮ ಸಮನ್ವಯ ರಥೋತ್ಸವದ ಚಿತ್ರಾವಳಿಗಳು

















# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ಕೇವಲ ಬರಿ 10 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಕನ್ನಡ

## ಎಸ್ಸೆಸ್ಸೆಲ್ಸಿ ಕನ್ನಡ (ಪ್ರ.ಭಾ) : ಬಹು ಆಯ್ಕೆ ಮತ್ತು ಸಂಬಂಧೀ ಪದ ಅಥವಾ ಪರ್ಯಾಯ ಆಯ್ಕೆ

ಸಾರ್ವತ್ರಿಕ ಪರೀಕ್ಷೆಯಲ್ಲಿ ಕೇಳಲಾದ ಬಹು ಆಯ್ಕೆ ಮತ್ತು ಸಂಬಂಧೀ ಪದ ಪ್ರಶ್ನೆಗಳು ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.

**1. 'ಮಳೆಗಾಲ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;**
(ಎ) ಲೋಪ ಸಂಧಿ (ಬಿ) ಆಗಮ ಸಂಧಿ
(ಸಿ) ಆದೇಶ ಸಂಧಿ (ಡಿ) ಗುಣ ಸಂಧಿ
**ಉತ್ತರ : (ಸಿ) ಆದೇಶ ಸಂಧಿ**

**2. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ;**
(ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ
(ಸಿ) ಆವರಣ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ
**ಉತ್ತರ : (ಎ) ಉದ್ಧರಣ ಚಿಹ್ನೆ**

**3. 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;**
(ಎ) ತತ್ಪುರುಷ ಸಮಾಸ (ಬಿ) ಕ್ರಿಯಾ ಸಮಾಸ
(ಸಿ) ಅಂಶಿ ಸಮಾಸ (ಡಿ) ದ್ವಿಗು ಸಮಾಸ
**ಉತ್ತರ : (ಎ) ತತ್ಪುರುಷ ಸಮಾಸ**

**4. 'ಸಾವಿತ್ರಿಯಲ್ಲಿ' ಈ ಪದದಲ್ಲಿರುವ ವಿಭಕ್ತಿಯ ಹೆಸರು;**
(ಎ) ದ್ವಿತೀಯಾ (ಬಿ) ತೃತೀಯಾ
(ಸಿ) ಪಂಚಮೀ (ಡಿ) ಸಪ್ತಮೀ
**ಉತ್ತರ : (ಡಿ) ಸಪ್ತಮೀ**

**5. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ;**
(ಎ) 02 (ಬಿ) 05
(ಸಿ) 06 (ಡಿ) 07
**ಉತ್ತರ : (ಬಿ) 05**

**6. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು;**
(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
(ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ
**ಉತ್ತರ : (ಬಿ) ಸಂಯೋಜಿತ ವಾಕ್ಯ**

**7. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ;**
(ಎ) ಆವರಣ (ಬಿ) ವಿವರಣ
(ಸಿ) ಉದ್ಧರಣ (ಡಿ) ವಾಕ್ಯವೇಷ್ಟನ
**ಉತ್ತರ : (ಬಿ) ವಿವರಣ**

**8. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹಣೆಯಾಗಿದೆ;**
(ಎ) ಕರ್ಮಧಾರಯ (ಬಿ) ದ್ವಿಗು
(ಸಿ) ತತ್ಪುರುಷ (ಡಿ) ಗಮಕ
**ಉತ್ತರ : (ಸಿ) ತತ್ಪುರುಷ**

**9. ತೃತೀಯಾ ವಿಭಕ್ತಿಯ ಕಾರಕಾರ್ಥ;**
(ಎ) ಸಂಪ್ರದಾನ (ಬಿ) ಅಪಾದಾನ
(ಸಿ) ಕರ್ಮಾರ್ಥ (ಡಿ) ಕರಣಾರ್ಥ
**ಉತ್ತರ : (ಡಿ) ಕರಣಾರ್ಥ**

**10. 'ಬೇಗನೆ' ಪದವು ಈ ಅವ್ಯಯಕ್ಕೆ ಸೇರಿದೆ;**
(ಎ) ಸಾಮಾನ್ಯಾರ್ಥಕ (ಬಿ) ಅನುಕರಣ
(ಸಿ) ಭಾವಸೂಚಕ (ಡಿ) ಕ್ರಿಯಾರ್ಥಕ
**ಉತ್ತರ : (ಎ) ಸಾಮಾನ್ಯಾರ್ಥಕ**

**11. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ;**
(ಎ) 06 (ಬಿ) 09
(ಸಿ) 13 (ಡಿ) 25
**ಉತ್ತರ : (ಬಿ) 09**

**12 . ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿರುವ ವಾಕ್ಯ;**
(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
(ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ
**ಉತ್ತರ : (ಸಿ) ಮಿಶ್ರ ವಾಕ್ಯ**

**ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.**

1. ಮಕ್ಕಳುಮರಿ : ಜೋಡುನುಡಿ : : ಓಡಿಓಡಿ : ದ್ವಿರುಕ್ತಿ
2. ವರ್ಷ : ವರುಸ : : ಕಾರ್ಯ : ಕಜ್ಜ
3. ತಿನ್ನುತ್ತೇನೆ : ವರ್ತಮಾನಕಾಲ : : ತಿನ್ನುವೆನು : ಭವಿಷ್ಯತ್ಕಾಲ
4.. ಮಾಡಲಿ: ವಿಧ್ಯರ್ಥಕ: :ಮಾಡಿಯಾರು : ಸಂಭಾವನಾರ್ಥಕ
5. ಬಟ್ಟಬಯಲು : ದ್ವಿರುಕ್ತಿ : : ಹುಳಹುಪ್ಪಡಿ : ಜೋಡುನುಡಿ
6. ಶರಚ್ಚಂದ್ರ : ಶ್ಚುತ್ವ ಸಂಧಿ : : ದಿಗಂತ : ಜಸ್ತ್ವ ಸಂಧಿ
7. ಮಲಗು: ಅಕರ್ಮಕ ಧಾತು : : ಕೊಡು : ಸಕರ್ಮಕ ಧಾತು
8. ವಂಧ್ಯಾ : ಬಂಜೆ : : ಕುಠಾರ : ಕೊಡಲಿ

ನಿರಂತರ ಪ್ರಯತ್ನ, ಸ್ಮಾರ್ಟ್ ರಿವಿಷನ್, ಆತ್ಮವಿಶ್ವಾಸ ಗರಿಷ್ಠ ಅಂಕ ಗಳಿಸಲು ಸಹಕಾರಿ. ಧನಾತ್ಮಕವಾಗಿ ಆಲೋಚಿಸಿ, ನಿಮ್ಮ ಮೇಲೆ ನಿಮಗೆ ನಂಬಿಕೆ ಇರಲಿ

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ